**ದಿ:14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ವಕೀಲರಿಂದಃ**

ವಾದಿಗಳಿಗೆ ಹಿಸ್ಸೆ ಕೊಡಬಾರದು ಎಂದು ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ವಾಹನ ಮತ್ತು ಐಟಂ 02 ದಾವಾ ಆಸ್ತಿಯನ್ನು ಸ್ವಂತ ಆದಾಯ ದಿಂದ ಖರೀದಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ದಾವಾ ಐಟಂ 03 ಕ್ಕೆ ಸಂಬಂದಿಸಿದಂತೆ ಪಾಲು ವಾಟ್ನಿ ಆಗಿದ್ದಾಗಿ ನಾನು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ವಾಟ್ನಿ ದಾಖಲೆ ಮೂಲಕ ಆಗಿರುವುದಿಲ್ಲ ಅಂದರೆ ಸರಿ. ವಾದಿ 01 ಎ ಮತ್ತು ಬಿ ರವರು ಮೃತ ವಾದಿಯ ವಾರಸುದಾರರು ಅಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾಟ್ನಿ ಆಗಿರದ ಕಾರಣ ಅವುಗಳಲ್ಲಿ ವಾದಿಗಳಿಗೆ ಹಿಸ್ಸೆ ಇರುತ್ತದೆ ಅಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಎಂದು ದಾವಾ ಐಟಂ ನಂ .02 ಆಸ್ತಿ ನನ್ನ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆ ಚಾಲ್ತಿಯಲ್ಲಿದ್ದಾಗ ನನ್ನ ತಂದೆಯಿಂದ ದಾವಾ ಐಟಂ ನಂ.02 ಆಸ್ತಿಗೆ ದಾನ ಪತ್ರಬರೆಸಿಕೊಂಡು ವರದಿ ನೀಡಿ ನನ್ನ ಮಕ್ಕಳ ಹೆಸರಿಗೆ ದಾಖಲಿಸಿಕೊಂಡಿರುವುದು ವಾದಿಗಳ ಮೇಲೆ ಅದು ಬಂಧನಕಾರಿ ಅಲ್ಲ ಎಂದರೆ

ಸರಿಯಲ್ಲ. ಸದರಿ ದಾನ ಪತ್ರವನ್ನು ವಾದಿಗಳಿಗೆ ಹಿಸ್ಸೆ ಸಿಗಬಾರದು ಎಂದು ಬರೆಯಿಸಿಕೊಂಡಿದ್ದು ಅದು ಖೋಟ್ಟಿ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಯಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ - ಇಲ್ಲ.</u>**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**